# 3. ನಿಸರ್ಗದ ಸೊಬಗು

ಉತ್ತರದ ಹಿಮಾಲಯದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ವಿಶಾಲವಾಗಿ ಹರಡಿರುವ ನಮ್ಮ ದೇಶವು ಪ್ರಕೃತಿ ರಮಣೀಯತೆಯಿಂದ ಕೂಡಿಕೊಂಡಿದೆ. ವಿಶಾಲವಾದ ನಿಸರ್ಗದ ಮಡಿಲಲ್ಲಿ ಗಗನವನ್ನು ಚುಂಬಿಸುವ ರೀತಿಯಲ್ಲಿ ಎದೆಯುಬ್ಬಿಸಿ ನಿಂತಿರುವ ಪರ್ವತಗಳು ಉಕ್ಕಿ ಹರಿಯುವ ನದಿಗಳು, ಗಂಭೀರವಾದ ಸಾಗರಗಳು, ವಿಶಾಲವಾದ ನೀಲಾಕಾಶ, ರಾತ್ರಿ ಹೊತ್ತು ಮಿನುಗುವ ಬೆಳ್ಳಿ ಚುಕ್ಕೆಗಳು, ಮನಸ್ಸಿಗೆ ಮುದವನ್ನು ನೀಡುವ ತಂಬೆಲರು...ಮತ್ತಿನ್ನೆಷ್ಟೆಷ್ಟೋ. ಇಂತಹ ಪ್ರಕೃತಿ ದತ್ತವಾದ ಸೌಂದರ್ಯವನ್ನು ಅನುಭವಿಸುವ ನಾವು ಧನ್ಯರಲ್ಲವೇ? ಪ್ರಕೃತಿಯ ಈ ಉದಾರ ಕೊಡುಗೆಯನ್ನು ವಿಕೃತಿಗೆಯ್ಯದೆ ಮುಂದಿನ ಪೀಳಿಗೆಗೆ ಇದರ ಬಗ್ಗೆ ಅರಿವು ಮೂಡಿಸುವ ಹೊಣೆಗಾರಿಕೆ ನಮ್ಮೆಲ್ಲರದು. 'ನಿಸರ್ಗದ ಸೊಬಗು' ಎಂಬ ಘಟಕದಲ್ಲಿ ಪೊಸಡಿಗುಂಪೆ(ಕವಿತೆ), ನಿಸರ್ಗದ ಮಡಿಲಲ್ಲಿ(ಪ್ರವಾಸ ಕಥನ), ಒಂದು ರಾತ್ರೆ (ಕವಿತೆ) ಪಾಠಗಳ ಮೂಲಕ ಪ್ರಕೃತಿ ಸೌಂದರ್ಯಕ್ಕೆ ಸಾಹಿತ್ಯ ರೂಪವನ್ನು ನೀಡಲಾಗಿದೆ. ಮಕ್ಕಳು ಪಾಠಗಳನ್ನು ಓದಿ, ಹಾಡಿ ಆಸ್ವಾದಿಸುವುದರೊಂದಿಗೆ ಪ್ರಕೃತಿಯನ್ನು ಉಳಿಸಿ ಬೆಳಸುವಂತಾಗಲಿ.

## ಕಲಿಕಾ ಸಾಧನೆಗಳು

- ಭಾಷಾ ಘಟಕಗಳಾದ ಪದಗಳು, ನುಡಿಗಟ್ಟುಗಳು, ಗಾದೆಗಳು ಇತ್ಯಾದಿಗಳನ್ನು ಸಂದರ್ಭಾನುಸಾರ ಉಪಯೋಗಿಸಿಕೊಂಡು ಮಾತನಾಡುವುದು.
- ರಾಗ, ತಾಳ, ಭಾವದೊಂದಿಗೆ ಮಂಡಿಸಿದ ಕವಿತೆಗಳನ್ನು ಆಲಿಸಿ ಆಸ್ವಾದಿಸುವುದು.
- ಗದ್ಯ, ಪದ್ಯವನ್ನು ಭಾವಪೂರ್ಣವಾಗಿ ಉಚ್ಚಾರಣ ಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.
- ವಾಚನಾನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ದಿನಚರಿ, ಆತ್ಮಕಥೆ, ಅನುಭವ ಟಿಪ್ಪಣಿ, ಜೀವನ ಚರಿತ್ರೆ ಮೊದಲಾದ ಲೇಖನಗಳನ್ನು ಓದಿ, ಸ್ವಂತ ಅನುಭವಗಳನ್ನು ಸೇರಿಸಿ ಸ್ವಯಂ ರಚನೆ ಮಾಡುವುದು.
- ವಿಭಿನ್ನ ಭಾಷಾನುಭವಗಳನ್ನು ಗಳಿಸಿ, ಪದಗಳ ಪ್ರಯೋಗಗಳೇ ಮೊದಲಾದವುಗಳನ್ನು ಬಳಸಿಕೊಂಡು ರಚನೆಗಳನ್ನು ಮಾಡುವುದು.
- ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯಿಸುವ ವಿವಿಧ ರೀತಿಗಳನ್ನು ಕಂಡುಕೊಳ್ಳುವುದು.
- ತನ್ನ ಮತ್ತು ಇತರರ ರಚನೆಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮ ಪಡಿಸುವುದು.
- ಕತೆ, ಕವಿತೆಗಳಲ್ಲಿ, ಲೇಖನಗಳಲ್ಲಿ, ಸಂದರ್ಭಾನುಸಾರ ಲೇಖನ ಚಿಹ್ನೆಗಳನ್ನು ಬಳಸುವುದು.
- ರಾಗ, ತಾಳ, ಭಾವಗಳಿಂದ ಕವಿತೆಗಳನ್ನು ಹಾಡುವುದು.
- ಕವಿತೆಗಳನ್ನು ಓದಿ, ಆಲಿಸಿ, ಸ್ವರ ಮಾಧುರ್ಯ, ಪದಸೌಂದರ್ಯ, ಗೇಯತೆಗಳನ್ನು ಆಸ್ವಾದಿಸಿ, ಆಶಯಗಳನ್ನು ತಿಳಿದು ಟಿಪ್ಪಣಿಗಳನ್ನು ತಯಾರಿಸುವುದು.

# ಯೂನಿಟ್ ಗ್ರಿಡ್ – 3. ನಿಸರ್ಗದ ಸೊಬಗು

**ಪಾಠ 1 : ಪೊಸಡಿಗುಂಪೆ** **ಸಮಯ : 6 ಪೀರಿಯಡ್**

| ಆಶಯ / ಉದ್ದೇಶ | ಪ್ರಕ್ರಿಯೆ/ಚಟುವಟಿಕೆಗಳು | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಪ್ರಕೃತಿಯು ರಮಣೀಯವಾಗಿದೆ.<br>• ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವುದು ಮತ್ತು ಪ್ರಕೃತಿಯ ಕುರಿತು ಅರಿವು ಮೂಡಿಸುವುದು.<br>• ಪ್ರಕೃತಿ ಸೌಂದರ್ಯವನ್ನು ಬಿಂಬಿಸುವ ಕವಿತೆಗಳು ಇವೆ ಎಂಬುದನ್ನು ತಿಳಿಯುವುದು. ಪರಿಸರ ಸೌಂದರ್ಯದ ಕುರಿತಾದ ರಚನೆಗಳಲ್ಲಿ ತೊಡಗುವುದು. ಗಾದೆ ಮಾತಿನ ಆಶಯ ತಿಳಿದು ವಿವರಣೆ ಬರೆಯು ವುದು. | • **ಹಾಡುವುದು:** ರಾಗ, ತಾಳ, ಭಾವ ಪೂರ್ಣವಾಗಿ ಹಾಡುವುದು.<br>• **ಸಾಲುಗಳನ್ನು ಗುರುತಿಸುವುದು:** ನಿರ್ದಿಷ್ಟ ಆಶಯವಿರುವ ಪದ್ಯದ ಸಾಲುಗಳನ್ನು ಗುರುತಿಸುವುದು.<br>• **ಇಷ್ಟವಾದ ಸಾಲು :** ಇಷ್ಟವಾದ ಸಾಲು ಗುರುತಿಸಿ ಕಾರಣವನ್ನು ಬರೆಯುವುದು.<br>• **ಪ್ರಾಸ ಗುರುತಿಸುವುದು:** ಪ್ರಾಸಪದಗಳನ್ನು ಗುರುತಿಸಿ ಬರೆಯುವುದು.<br>• **ಕವನ ರಚಿಸುವುದು:** ಪ್ರಾದೇಶಿಕ ಬೆಟ್ಟದ ಬಗ್ಗೆ ಕವಿತೆ ರಚಿಸುವುದು.<br>• **ಆಶಯ ಬರೆಯುವುದು:** ಗಾದೆಗಳ ಆಶಯ ಬರೆಯುವುದು.<br>• **ಕವಿತೆಗಳನ್ನು ಸಂಗ್ರಹ ಮಾಡುವುದು:** ಪ್ರಕೃತಿ ವರ್ಣನೆಯ ಕವಿತೆಗಳನ್ನು ಸಂಗ್ರಹಿಸುವುದು.<br>• **ಪದ ಗುರುತಿಸುವುದು:** ಸರಿಯಾದ ಪದಗಳನ್ನು ಗುರುತಿಸುವುದು. | ಧ್ವನಿ ಸುರುಳಿ.<br>ಪ್ರಕೃತಿ ವರ್ಣನೆಯ ಹಾಡುಗಳ ಪುಸ್ತಕ | ಹಾಡುವಿಕೆ<br>ಸರಿಯಾದ ಸಾಲು ಗುರುತಿಸುವಿಕೆ<br>ಪ್ರಾಸ ಪದಗಳು<br>ಕವಿತೆ<br>ಟಿಪ್ಪಣಿ<br>ಕವಿತಾ ಸಂಗ್ರಹ |

**ಪಾಠ 2 : ನಿಸರ್ಗದ ಮಡಿಲಲ್ಲಿ** **ಸಮಯ 6 ಪೀರಿಯಡ್**

| ಆಶಯ / ಉದ್ದೇಶ | ಪ್ರಕ್ರಿಯೆ/ಚಟುವಟಿಕೆಗಳು | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಗದ್ಯವನ್ನು ಭಾವಪೂರ್ಣವಾಗಿ, ಉಚ್ಚಾರಣ ಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.<br>• ಪ್ರವಾಸದ ಅನುಭವಗಳನ್ನು ತಿಳಿಸುವ ಹಲವಾರು ಲೇಖನ ಗಳನ್ನು ಓದಿ ತಿಳಿಯವುದು.<br>• ಸ್ವಂತ ಅನುಭವಗಳನ್ನು ಬರೆಯುವುದು.<br>• ತಮ್ಮ ಪ್ರದೇಶದಲ್ಲಿರುವ ಪ್ರವಾಸಿ ತಾಣಗಳ ಬಗ್ಗೆ ತಿಳಿಯುವುದು.<br>• ಪ್ರವಾಸಿ ತಾಣಗಳನ್ನು ಸಂದರ್ಶಿಸುವುದು ಹಾಗೂ ಅವುಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮನೋ ಭಾವವನ್ನು ರೂಢಿಸಿಕೊಳ್ಳುವುದು. | • **ಓದುವುದು:** ಗಟ್ಟಿಯಾಗಿ ಓದಿಸುವುದು.<br>• **ಆಶಯ ತಿಳಿಯುವುದು:** ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಆಶಯ ತಿಳಿಯುವುದು ಅನುಭವ ಟಿಪ್ಪಣಿ ಬರೆಯುವುದು.<br>• **ಲೇಖನ ಬರೆಯುವುದು:** ಪ್ರವಾಸದ ಅನುಭವಗಳನ್ನು ಲೇಖನ ರೂಪದಲ್ಲಿ ಪ್ರಕಟಪಡಿಸುವುದು. | ಪ್ರವಾಸ ಕಥನಗಳು | ಉಚ್ಚಾರಣ ಶುದ್ಧಿ, ಸ್ವರ ಭಾರಯುಕ್ತವಾಗಿ ಓದುವಿಕೆ<br>ಅನುಭವ ಟಿಪ್ಪಣಿ<br>ಪ್ರವಾಸಾನುಭವ |

| **ಪಾಠ 3 : ಒಂದು ರಾತ್ರೆ** | | | **ಸಮಯ 6 ಪೀರಿಯಡ್** |
|---|---|---|---|
| ಆಶಯ / ಉದ್ದೇಶ | ಪ್ರಕ್ರಿಯೆ/ಚಟುವಟಿಕೆಗಳು | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
| • ಬೆಳದಿಂಗಳ ರಾತ್ರೆಯ ಕುರಿತಾಗಿರುವ ಹಲವಾರು ಕಥೆ ಕವನಗಳು ಕನ್ನಡ ಸಾಹಿತ್ಯದಲ್ಲಿವೆ.<br>• ಪ್ರಕೃತಿಯಲ್ಲಿ ರಾತ್ರೆಗೂ ಅದರದ್ದೇ ಆದ ಪ್ರಾಧಾ ನ್ಯವಿದೆ.<br>• ಸೃಜನಾತ್ಮಕ ರಚನೆಗಳಲ್ಲಿ ತೊಡಗುವುದು.<br>• ಕತೆ, ಕವನ, ಲೇಖನಗಳಲ್ಲಿರುವ ವರ್ಣನೆಯನ್ನು ಓದಿ ಆಸ್ವಾದಿಸುವುದು. | • **ಹಾಡುವುದು:** ಪದ್ಯವನ್ನು ರಾಗವಾಗಿಯೂ, ಭಾವಪೂರ್ಣವಾಗಿಯೂ ಹಾಡುವುದು.<br>• **ಉತ್ತರ ಬರೆಯುವುದು:** ಆಶಯ ಪೂರ್ಣವಾಗಿ ಪ್ರಶ್ನೆಗಳಿಗೆ ಉತ್ತರಿಸುವುದು.<br>• **ಸಾರಾಂಶ ಬರೆಯುವುದು:** ಪದ್ಯದ ಸಾರಾಂಶ ಬರೆಯುವುದು.<br>• **ಪದ ರಚಿಸುವುದು:** ಅಕ್ಷರಗಳನ್ನು ಕ್ರಮೀಕರಿಸಿ ಅರ್ಥ ಪೂರ್ಣ ಪದ ರಚಿಸುವುದು.<br>• **ವಿಂಗಡಿಸಿ ಬರೆಯುವುದು:** ಸಂಯುಕ್ತ ಪದಗಳನ್ನು ವಿಂಗಡಿಸಿ ಬರೆಯುವುದು.<br>• **ಕವನ ರಚಿಸುವುದು:** ಚಂದಿರನ ಕುರಿತಾದ ಕವನ ರಚಿಸುವುದು. | • 'ತಿಳಿಮುಗಿಲ ತೊಟ್ಟಿಲಲಿ' ಪದ್ಯದ ಧ್ವನಿ ಸುರುಳಿ.<br>• ಚಂದಿರನ ಕುರಿತಾದ ಕವಿತೆಗಳು. ಹುಣ್ಣಿಮೆ ರಾತ್ರಿಯ ವಿಡಿಯೋ ಕ್ಲಿಪ್ಪಿಂಗ್ | • ಹಾಡುವಿಕೆ<br>• ಉತ್ತರಗಳು<br>• ಸಾರಾಂಶ<br>• ಕವನ |

# ಪೊಸಡಿಗುಂಪೆ

ಗುಡ್ಡ, ಬೆಟ್ಟ, ಕಾಡುಗಳು, ಕೆರೆ, ನದಿಗಳು ನಮಗೆ ಉಪಕಾರಿಗಳಾಗಿರುವುದಲ್ಲದೆ ಸುಂದರವಾಗಿ ಗೋಚರಿಸಿ ಕಣ್ಮನಗಳಿಗೆ ಮುದ ನೀಡುತ್ತವೆ. ನಮ್ಮ ಜಿಲ್ಲೆಯ ಉತ್ತರಭಾಗದಲ್ಲಿ ತನಗೆ ಯಾರೂ ಸರಿಸಾಟಿಯಿಲ್ಲ ಎಂಬಂತೆ ತಲೆಎತ್ತಿ ನಿಂತಿರುವ ಬೆಟ್ಟವೇ ಪೊಸಡಿಗುಂಪೆ. ಕಾಸರಗೋಡಿನ ಹಿರಿಯಕವಿ ಕಯ್ಯಾರ ಕಿಞ್ಞಣ್ಣ ರೈಗಳು ಈ ಬೆಟ್ಟದ ಸೌಂದರ್ಯವನ್ನು, ಗಾಂಭೀರ್ಯವನ್ನು ತಮ್ಮ ಕವನದಲ್ಲಿ ಸುಂದರವಾಗಿ ಒಡಮೂಡಿಸಿದ್ದಾರೆ.

### ಕಯ್ಯಾರ ಕಿಞ್ಞಣ್ಣ ರೈ

ಕವಿ, ಸ್ವಾತಂತ್ರ್ಯ ಯೋಧ, ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕರಾದ ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈಗಳು 1915 ಜೂನ್ 8ರಂದು ದುಗ್ಗಪ್ಪ ರೈ ಹಾಗೂ ದೈಯ್ಯಕ್ಕೆ ದಂಪತಿಗಳ ಮಗನಾಗಿ ಜನಿಸಿದರು. ಇವರು ವಿದ್ವಾನ್ ಪದವಿಯೊಂದಿಗೆ ಅಧ್ಯಾಪಕ ತರಬೇತಿ ಪೂರ್ಣಗೊಳಿಸಿ, ನವಜೀವನ ಪ್ರೌಢಶಾಲೆಯಲ್ಲಿ ಶಿಕ್ಷಕರಾದರು. ಮುಂದೆ ಬಿ.ಎ. ಮತ್ತು ಎಂ.ಎ ಪದವಿಗಳನ್ನು ಪಡೆದರು. ಇವರು ಪದ್ಯ, ಗದ್ಯ, ವಿಮರ್ಶೆ, ವ್ಯಾಕರಣ, ನಾಟಕ, ಆತ್ಮಕಥನ, ಅನುವಾದ ಇವೇ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ನಿಪುಣರು. ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಶತಮಾನದ ಗಾನ, ರತ್ನರಾಶಿ ದುಡಿತವೇ ನನ್ನ ದೇವರು – ಇವೇ ಮೊದಲಾದ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಇವರ ಕವನಗಳೆಲ್ಲವೂ ಪ್ರತಿಭಾ ಪಯಸ್ವಿನಿ ಎನ್ನುವ ಬೃಹತ್ ಕೃತಿಯಲ್ಲಿ ಸಂಕಲಿತವಾಗಿವೆ. ಪತ್ರಿಕಾ ಸಂಪಾದಕರಾಗಿ, ಕನ್ನಡ ಹೋರಾಟಗಾರರಾಗಿ, ಶ್ರೇಷ್ಠ ಅಧ್ಯಾಪಕರಾಗಿ, ಬದಿಯಡ್ಕ ಗ್ರಾಮ ಪಂಚಾಯತು ಅಧ್ಯಕ್ಷರಾಗಿ ನಾಡಿಗೆ ಬಹುಮುಖ ಸೇವೆಯನ್ನು ಸಲ್ಲಿಸಿದ್ದಾರೆ.

**ಪಾಠ ಪ್ರವೇಶ**

ಪೊಸಡಿಗುಂಪೆಯ ಪ್ರಕೃತಿ ರಮಣೀಯವಾದ ಚಿತ್ರವನ್ನು ತೋರಿಸುವುದು. ಅಧ್ಯಾಪಕರು ಕೆಲವು ಪ್ರಶ್ನೆಗಳನ್ನು ಕೇಳುವುದು.

- ಇದು ಯಾವ ಬೆಟ್ಟ?
- ಇದು ಎಲ್ಲಿದೆ?
- ಇದರ ಬಗ್ಗೆ ನಿಮಗೆ ಏನು ತಿಳಿದಿದೆ?

ಇತ್ಯಾದಿ ಪ್ರಶ್ನೆಗಳನ್ನು ಕೇಳಿ ಅನಂತರ ವಿವರಣೆಯಿಂದೊಡಗೂಡಿದ 'ಪೊಸಡಿಗುಂಪೆಯ ವೀಡಿಯೋ' ವನ್ನು ಪ್ರದರ್ಶಿಸುವುದು.

**ಹಾಡುವುದು**

ಪೊಸಡಿಗುಂಪೆಯ ಸೌಂದರ್ಯವನ್ನು ಆಸ್ವಾದಿಸಿದಿರಲ್ಲವೇ? ಈ ಬೆಟ್ಟದ ಕುರಿತು ಕವಿ ಕೈಯಾರ ಕಿಞ್ಞಣ್ಣ ರೈಯವರು ಬರೆದ ಹಾಡನ್ನು ಓದುವ ಎಂದು ಹೇಳಿ ಮಕ್ಕಳನ್ನು ಗುಂಪುಗಳನ್ನಾಗಿಸಿ ಓದಲು ಹೇಳುವುದು. ಬಳಿಕ ಅವರು ರಾಗ ಸಂಯೋಜಿಸಿ

ಗುಂಪಲ್ಲಿ ಹಾಡಲಿ. ಉಳಿದ ಗುಂಪಿನವರು ಮೌಲ್ಯಮಾಪನ ಮಾಡಲಿ.

### ಮೌಲ್ಯನಿರ್ಣಯ ಸೂಚಕಗಳು

- ರಾಗ ತಾಳ ಲಯ
- ಸ್ವರದ ಹೊಂದಾಣಿಕೆ
- ಭಾವ ಪೂರ್ಣತೆ
- ಸ್ಪಷ್ಟ ಉಚ್ಚಾರಣೆ

ಉತ್ತಮವಾಗಿ ಹಾಡಿದವರನ್ನು ಅಭಿನಂದಿಸುವುದು.

ಪದ್ಯದಲ್ಲಿ ಬಂದಿರುವ ನವೀನ ಪದಗಳನ್ನು ಗುರುತಿಸಿ ಬರೆಯಲಿ. ಅರ್ಥಕೋಶದ ಸಹಾಯದಿಂದ ಅರ್ಥ ಬರೆದು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಅನಂತರ ಪದ್ಯದ ಆಶಯವನ್ನು ಮಕ್ಕಳು ಚರ್ಚಿಸಿ ಹೇಳಲಿ ಅಧ್ಯಾಪಕರು ಅಗತ್ಯವಿದ್ದಲ್ಲಿ ಸಹಕರಿಸುವುದು.

### ಸಾಲು ಗುರುತಿಸುವುದು

ಪದ್ಯದ ಕೆಲವು ಸಾಲುಗಳನ್ನು ಅಧ್ಯಾಪಕರು ಹೇಳುವುದು (ಟಿ.ಬಿ.). ಮಕ್ಕಳು ಅವುಗಳ ಆಶಯವನ್ನು ಹೇಳಲಿ. ಅನಂತರ ಬರೆದು ಮಂಡಿಸಲಿ.

### ಕಾರಣ ಬರೆಯುವುದು

ಮಕ್ಕಳಿಗೆ ಇಷ್ಟವಾದ ಸಾಲನ್ನು ಬರೆಯಲು ಹೇಳುವುದು. ಅದನ್ನು ಓದಿ ಹೇಳಲಿ. ಯಾಕೆ ಇಷ್ಟವಾಯಿತು? ಎಂಬುದನ್ನು ಹೇಳಿ, ಬಳಿಕ ಅದನ್ನು ಬರೆದು ಮಂಡಿಸಲಿ.

### ಪ್ರಾಸ ಪದಗಳನ್ನು ಗುರುತಿಸುವುದು

ಪದ್ಯದಲ್ಲಿರುವ ಪ್ರಾಸ ಪದಗಳನ್ನು ಗುರುತಿಸಿ ಹೇಳಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ಬರೆದುಕೊಳ್ಳಲಿ. ಇದೇ ರೀತಿ ಪ್ರಾಸಪದಗಳಿರುವ ಹಾಡನ್ನು ನೀಡುವುದು. ಅದರಲ್ಲಿರುವ ಪ್ರಾಸಪದಗಳನ್ನು ಮಕ್ಕಳು ಗುರುತಿಸಿ ಬರೆಯಲಿ.

**ಉದಾ:**

ಹಸಿರುಟ್ಟ ಪ್ರಕೃತಿ ಮಾತೆಯ ಚೆಲುವು ನೋಡಿ
ಹೊಸತು ಮದುವಣಗಿತ್ತಿಯಂತಿರುವ ಮೋಡಿ
ಬಣ್ಣ ಬಣ್ಣದ ಹೂವ ಧರಿಸಿರುವ ಗಿಡವು
ಹಣ್ಣುಗಳ ಭಾರದಿಂ ಬಾಗಿಹವು ಮರವು
ಕಣ್ಣು ತೆರೆಸುವ ಜಾಜಿ ಮಲ್ಲಿಗೆಯ ಹೂವು
ಚಿಣ್ಣರನು ಸೆಳೆಯುತಿಹ ನುಣ್ಣನೆಯ ಮಾವು
ಕೊಳದಿ ಈಜಾಡುವವು ಹಂಸಗಳ ಹಿಂಡು
ಬಳಿಗೆ ಹಾರುವ ಬರುವ ಶುಕ ಪಿಕದ ದಂಡು
ಪ್ರಕೃತಿ ಸೌಂದರ್ಯವನು ವರ್ಣಿಸುವುದೇನು?
ವಿಕೃತಿಗೈಯುವ ಮನುಜನಿಂದ ಮುಂದೇನು?

### ಕವಿತೆ ರಚಿಸುವ

ಅಧ್ಯಾಪಕರು ಗುಡ್ಡ ಬೆಟ್ಟಗಳಿಗೆ ಸಂಬಂಧಿಸಿದ ಕೆಲವು ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು.




ಪದಸೂರ್ಯದ ಆಧಾರದಲ್ಲಿ ಕವಿತೆಯನ್ನು ರಚಿಸಿ ತರಗತಿಯಲ್ಲಿ ಮಂಡಿಸಲಿ. ಸಾಲುಗಳ ರಚನೆಯ ಕುರಿತು ಮಕ್ಕಳೊಂದಿಗೆ ಚರ್ಚಿಸುವುದು (ಪದ ಜೋಡಣೆ, ಪ್ರಾಸ, ಆಶಯ ಇತ್ಯಾದಿ)

ಕವಿತೆ ಹೇಗಿರಬೇಕು?

- ಆಶಯ ಸ್ಪಷ್ಟತೆ
- ಕ್ರಮೀಕರಣ
- ಪ್ರಾಸ ಪದಗಳು
- ವರ್ಣನೆ

ಸೂಚಕದ ಆಧಾರದಲ್ಲಿ ಮೌಲ್ಯಮಾಪನ ಮಾಡುವುದು. ಬರೆದ ಕವಿತೆಗಳನ್ನು ಉತ್ತಮಪಡಿಸಿ ಸಂಚಿಕೆ ತಯಾರಿಸಲಿ.

### ಆಶಯ ಬರೆಯುವ

ಪಠ್ಯಪುಸ್ತಕದಲ್ಲಿ ನೀಡಿರುವ ಗಾದೆ ಮಾತಿನ ಆಶಯವನ್ನು ಮಕ್ಕಳು ಓದಲಿ. ಮಕ್ಕಳಿಗೆ ತಿಳಿದ ಕೆಲವು ಗಾದೆ ಮಾತುಗಳನ್ನು ಹೇಳಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ಈ ಗಾದೆ ಮಾತುಗಳಲ್ಲಿ ಇಷ್ಟವಾದ ಗಾದೆ ಮಾತಿನ ಆಶಯವನ್ನು ಚರ್ಚಿಸಿ ಬರೆದು ಮಂಡಿಸಲಿ.

ಉದಾಃ

### ತಾಳಿದವನು ಬಾಳಿಯನು

ಮನುಷ್ಯನು ಯಾವಾಗಲೂ ತಾಳ್ಮೆಯಿಂದಿರ ಬೇಕು. ತಾಳ್ಮೆಗೆಟ್ಟರೆ ಅನೇಕ ಅನಾಹುತಗಳು ನಡೆಯಬಹುದು. ತಾಳ್ಮೆ ಅಥವಾ ಸಹನೆಯಿಂದ ಜೀವನ ನಡೆಸುವವನಿಗೆ ಯಾವುದೂ ಕಷ್ಟವೆನಿಸುವುದಿಲ್ಲ. ತಾಳ್ಮೆ ಇರುವುದರಿಂದ ಒಳಿತೇ ಹೆಚ್ಚು. ಮಾತು ಮಾತಿಗೂ ಜಗಳಾಡುವವನ ಬದುಕು ನೆಮ್ಮದಿಯಿಂದ ಇರುವುದಿಲ್ಲ. ದಿನನಿತ್ಯ ಕೋಪ–ಬೇಸರದಿಂದ ತೊಳಲಾಡುತ್ತಾನೆ. ಆದರೆ ತಾಳ್ಮೆಯಿಂದ ನಡೆದವನ ಬದುಕು ಸುಖಮಯವಾಗಿರುತ್ತದೆ.

### ಸಂಗ್ರಹಿಸುವುದು

ಓದುವಮೂಲೆ ಗ್ರಂಥಾಲಯದಿಂದ ಪ್ರಕೃತಿಗೆ ಸಂಬಂಧಿಸಿದ ಕವಿತೆಗಳನ್ನು ಸಂಗ್ರಹಿಸಲಿ. ಆ ಬಳಿಕ ಅವುಗಳಲ್ಲಿ ಇಷ್ಟವಾದುದನ್ನು ತರಗತಿಯಲ್ಲಿ ಹಾಡಲಿ.

### ಪೊಸಡಿಗುಂಪೆ

ನೂರು ಝರಿಯ ಮೂಲವಾಗಿ
ಉದರದೊಳಗೆ ಜಲನಿಧಿ
ಅಲ್ಲಿ ನೋಡು ಪೊಸಡಿಗುಂಪೆ
ಜೀವಜಗದ ತವನಿಧಿ

ಮನೆಗಳೆಷ್ಟೊ ಮಠಗಳೆಷ್ಟೊ
ಮೆರೆಯುತಿಹವು ಮಡಿಲಲಿ
ತೆಂಗು ಕಂಗು ಮಾವು ಹಲಸು
ಮರಗಳಿಹವು ಬುಡದಲಿ

ಮೂರು ತಲೆಯ ಶೋಭೆ ನಿನಗೆ
ಅತ್ರಿಸುತಗೆ ಸಾಟಿಯೆ
ಗುಹಾಭಸ್ಮ ತೀರ್ಥದಲ್ಲಿ
ನಿನ್ನ ಸ್ತುತಿಯ ಗಾಥೆಯೆ

ಬಹಳ ಎತ್ತರಕ್ಕೆ ಮೆರೆವ
ಹಿಮದ ನಗದ ನೆರಳಿದೊ
ಧರಣಿ ಸ್ವರ್ಗದೆಡೆಗೆ ಕೈಯ
ನೀಡಿ ನಿಂತ ನಿಲುವಿದೊ

ಮುಗಿಲಮಾಲೆ ಸೂಡಿನಿಂತ
ವಿಭವ ಪೂರ್ಣ ಮೂರುತಿ
ಪಶ್ಚಿಮಾಂಬು ಹೆಮ್ಮೆಯಿಂದ
ಹಾಡುತಿಹುದು ಕೀರುತಿ

ಹೊನ್ನರಾಶಿ ಧೀರ ನಿಲುವು
ಮೆರೆವ ಕೀರ್ತಿ ನಿನ್ನದು
'ಗುಂಪೆ' ನಿನ್ನ ನೋಡಿ ಹೆಮ್ಮೆ
ಪಡುವ ಮನಸು ನಮ್ಮದು

**– ಮಧುರಕಾನನ ಗೋಪಾಲಕೃಷ್ಣ ಭಟ್**

### ಸರಿಯಾದ ಪದ ಗುರುತಿಸುವುದು

ಪಠ್ಯಪುಸ್ತಕದಲ್ಲಿ ನೀಡಿರುವ ಪದಗಳನ್ನು ಓದಲಿ. ಅವುಗಳಲ್ಲಿ ಸರಿಯಾದ ಪದವನ್ನು ಗುರುತಿಸಲಿ. ಅನಂತರ ಅದನ್ನು ಬರೆಯಲಿ. ಅಧ್ಯಾಪಕರು ಸರಿಯಾದ ಪದವನ್ನು ಕರಿಹಲಗೆಯಲ್ಲಿ ಬರೆದು ಓದಿಸುವುದು.

## ನಿಸರ್ಗದ ಮಡಿಲಲ್ಲಿ

### ಪಾಠ ಪ್ರವೇಶ

ಅಧ್ಯಾಪಕರು ಕೆಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಪಾಠ ಪ್ರವೇಶ ಮಾಡುವುದು.

- ನೀವು ಎಲ್ಲಿಗಾದರೂ ಪ್ರಯಾಣ ಮಾಡಿದ್ದೀರಾ?
- ಪ್ರವಾಸೀ ಧಾಮಗಳ ಸಂದರ್ಶನದಿಂದ ನಮಗೆ ದೊರೆಯುವ ಪ್ರಯೋಜನವೇನು?
- ಪ್ರವಾಸದ ಅನುಭವಗಳನ್ನು ಬರೆದಿದ್ದೀರಾ?
- ಪ್ರವಾಸದ ಅನುಭವಗಳನ್ನು ಬರೆಯುವುದು ಉತ್ತಮವಲ್ಲವೇ?
- ಇತರರ ಯಾವುದಾದರೂ ಪ್ರವಾಸಾನುಭವಗಳನ್ನು ಓದಿದ್ದೀರಾ?

ಎಂಬಿತ್ಯಾದಿ ಪ್ರಶ್ನೆಗಳ ಮೂಲಕ ಪಾಠ ಪ್ರವೇಶ ಮಾಡಬಹುದು. ಹಿಮಾಲಯದ ವೀಡಿಯೋ ಲಭ್ಯವಿದ್ದಲ್ಲಿ ಅದನ್ನು ತೋರಿಸಿ, ಪ್ರಶ್ನೆಗಳನ್ನು ಕೇಳುವುದರ ಮೂಲಕವೂ ಪಾಠ ಪ್ರವೇಶ ಮಾಡಬಹುದು. ಅಥವಾ ಉಚಿತವಾದ ಯಾವುದಾದರೂ ರೀತಿಯಲ್ಲಿ ಪಾಠ ಪ್ರವೇಶ ಮಾಡಬಹುದು.

ಪಾಠವನ್ನು ಮೌನವಾಗಿ ಓದಲು ಹೇಳುವುದು. ನವೀನಪದಗಳನ್ನು ಪಟ್ಟಿಮಾಡಿ, ಅರ್ಥಕೋಶದ ಸಹಾಯದಿಂದ ಅರ್ಥ ಕಂಡುಕೊಳ್ಳಲಿ. ತರಗತಿಯಲ್ಲಿ ಮಂಡಿಸಲಿ. ಅವುಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.

ಅಧ್ಯಾಪಕರು ಗದ್ಯಭಾಗವನ್ನು ಸ್ವರಭಾರಯುಕ್ತವಾಗಿ, ಭಾವಪೂರ್ಣವಾಗಿ ಓದುವುದು. ಮಕ್ಕಳು ಸರಣಿಯಲ್ಲಿ ಗದ್ಯಭಾಗವನ್ನು ಓದಲಿ.

## ಚಟುವಟಿಕೆಗಳು

### ಉತ್ತರಿಸುವ

ಪಠ್ಯಪುಸ್ತಕದಲ್ಲಿ ನೀಡಿರುವ ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು. ಪ್ರತಿಯೊಂದು ಗುಂಪಿನಿಂದಲೂ ಉತ್ತರವನ್ನು ಹೇಳಿಸುವುದು. ಮಕ್ಕಳು ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಕ್ರೋಡೀಕರಿಸಿ ಕರಿಹಲಗೆಯಲ್ಲಿ ಬರೆಯುವುದು.

### ಅನುಭವ ಟಿಪ್ಪಣಿ ಬರೆಯುವ

'ನೆನಪಿಸಿಕೊಂಡರೆ ಮೈ ಜುಂ ಎನ್ನುತ್ತದೆ' ಲೇಖಕಿ ಹೇಳಿದ ಮಾತನ್ನು ಕರಿಹಲಗೆಯಲ್ಲಿ ಬರೆಯುವುದು. ಲೇಖಕಿ ಈ ರೀತಿ ಹೇಳಲು ಕಾರಣವೇನು?ಎಂಬುದನ್ನು ಮಕ್ಕಳು ಬಾಯ್ದೆರೆಯಾಗಿ ಹೇಳಲಿ. ಮಕ್ಕಳಿಗೆ ಆದ ಅನುಭವಗಳನ್ನು ಹೇಳಿಸುವುದು. ಅನಂತರ ಮಕ್ಕಳು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಪರಸ್ಪರ ಮೌಲ್ಯಮಾಪನ ಮಾಡಲಿ.

### ಮೌಲ್ಯನಿರ್ಣಯ ಸೂಚಕಗಳು

- ಆಶಯ ಸ್ಪಷ್ಟತೆ
- ಸ್ವ ಅನುಭವಗಳು ಒಳಗೊಂಡಿರಬೇಕು
- ಭಾಷಾ ಶೈಲಿ
- ಘಟನೆಗಳ ಕ್ರಮೀಕರಣ

ಅಧ್ಯಾಪಕರು ಇಂತಹ ಒಂದು ಸ್ವಂತ ಅನುಭವವನ್ನು ಬರೆದು ಪ್ರದರ್ಶಿಸುವುದು.

### ಪದ ಬರೆಯುವುದು

ವರ್ಣನೆಗೆ ಸಂಬಂಧಿಸಿದ ಕೆಲವೊಂದು ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಉದಾ: ಬಳ್ಳಿಯಂತೆ ಬಳುಕುತ್ತಾ. ಇಂತಹ ಪದಗಳನ್ನು ಮಕ್ಕಳು ಹೇಳಲಿ.

ಉದಾ: ಜಿಂಕೆಯಂತೆ ಜಿಗಿಯುತ್ತ
ಹಕ್ಕಿಯಂತೆ ಹಾರುತ್ತಾ
ಹಾವಿನಂತೆ ತೆವಳುತ್ತಾ
ಕಪ್ಪೆಯಂತೆ ನೆಗೆಯುತ್ತಾ

ಮಕ್ಕಳು ಬರೆದು ಮಂಡಿಸಲಿ.

## ಪ್ರವಾಸಾನುಭವ ಬರೆಯುವುದು

ಒಂದು ಪ್ರವಾಸಾನುಭವದ ಲೇಖನವನ್ನು ಅಧ್ಯಾಪಕರು ತರಗತಿಯಲ್ಲಿ ಓದುವುದು.

# ಘಾಟಿ

ನಾವು ಗುಪ್ತ ಕಾಶಿಗೆ ಪ್ರವಾಸ ಹೊರಟೆವು. ಅಲ್ಲಿಂದ ಒಂದು ಮೈಲಿ ಬಂದರೆ ನೆಲ್ಲಚೆಟ್ಟಿ ಎಂಬ ಗ್ರಾಮ ಸಿಗುವುದು. ಅಲ್ಲಿಂದ ಒಂದು ಮಾರ್ಗ ಬಲಗಡೆಗೆ ಚಮೋಲಿಗೆ ಹೋಗಿ ಅಲ್ಲಿಂದ ಬದರಿಗೆ ಹೋಗುವುದು. ಇದು ವರೆಗೆ ನಮಗೆ ಕೇದಾರನಾಥದಿಂದ ಹಿಂತಿರುಗಿ ಬರುತ್ತಿದ್ದ ಯಾತ್ರಿಕರ ದರ್ಶನವಾಗಿರಲಿಲ್ಲ. ಏಕೆಂದರೆ ಕೇದಾರನಾಥಕ್ಕೆ ಹೋಗುವವರೆಲ್ಲಾ ಇಲ್ಲಿಯ ವರೆಗೆ ಬಂದು ಇಲ್ಲಿಂದ ಬದರಿಗೆ ಹೋಗುವರು. ನಮಗೆ ಇಲ್ಲಿ ಕೇದಾರದ ದರ್ಶನ ಮಾಡಿಕೊಂಡು ಹಿಂತಿರುಗಿ ಬರುತ್ತಿದ್ದ ಯಾತ್ರಿಕರ ತಂಡ ಗೋಚರಿಸತೊಡಗಿತು. ಬರುವವರು ಹೋಗುತ್ತಿರುವ ಯಾತ್ರಿಕರನ್ನು ಕಂಡರೆ 'ಜೈ ಕೇದಾರನಾಥಕೀ' ಎಂದು ಹಾರೈಸುವರು. ಹೋಗುವವರ ಯಾತ್ರೆ ಸುಗಮವಾಗಲಿ. ಶಿವನ ದಯೆ ಇರಲಿ ಎಂದು ಹಾರೈಸುವ ಚಿಹ್ನೆ.

ದಾರಿಯಲ್ಲಿ ಹೋಗುತ್ತಿರುವಾಗ ಅನೇಕ ಜನ ಮಕ್ಕಳು 'ಪೈಸಾ ದೇವ್ ಸೇಟ್‌ಜಿ' ಎಂದು ಗೋಗರೆಯುವರು. ಅಲ್ಲಿರುವವರಿಗೆ ಯಾತ್ರೆಯ ಕಾಲ ಶುರುವಾದಾಗಲೇ ಸ್ವಲ್ಪ ಕೈಗೆ ಕಾಸು ಬರಬೇಕಾದರೆ ಯಾತ್ರಿಕರಿಂದ. ಇವರು ಇರುವ ಕಡೆ ಫಲವತ್ತಾದ ಭೂಮಿಯಿಲ್ಲ. ಬೆಟ್ಟವನ್ನು ಕಡಿದು ಮೆಟ್ಟಿಲು ಮೆಟ್ಟಿಲಾಗಿ ಮಾಡಿ ಅಲ್ಲಿ ಗೋಧಿ ಮುಂತಾದವುಗಳನ್ನು ಬೆಳೆಸುವರು. ಅವರು ಬೆಳೆಸುವುದು ಅವರ ಜೀವನೋಪಾಯಕ್ಕೆ ಆಗುವುದೇ ಕಷ್ಟ. ಅಷ್ಟರಲ್ಲಿ ಅವರ ಬಟ್ಟೆಬರೆಗೆ ದುಡ್ಡು ಸಿಗಬೇಕಾದರೆ ಗಂಡಸರು ಯಾತ್ರಿಕರ ಸಾಮಾನು ಹೊರಲು ಹೋಗುವರು. ಅದರಿಂದ ಬಂದ ದುಡ್ಡಿನಿಂದ ಮದುವೆ ಮುಂತಾದವುಗಳನ್ನು ಮಾಡಬೇಕು. ವರ್ಷದಲ್ಲಿ ಮಾಡಿದ ಸಾಲ ತೀರಿಸಬೇಕು. ಹೆಂಗಸರು ಕುರಿಯ ತುಪ್ಪಟದಿಂದ ದಾರ ತೆಗೆದು ತಾವೇ ಬಟ್ಟೆ ಮಾಡಿಕೊಳ್ಳುವರು. ಅವರು ಯಾತ್ರಿಕರನ್ನು ಸಂಧಿಸುವಾಗ 'ಸೀಯೀದಾರ ಸೇಟ್‌ಜಿ' ಎನ್ನುವರು. ಅಂದರೆ ಸೂಜಿ, ದಾರ ಕೊಡಿ ಎಂದು. ಎಲ್ಲರೂ ಸೂಜಿ ದಾರವನ್ನು ಕೇಳುವವರೇ ಅವರ ಬಟ್ಟೆಯನ್ನು ಹೊಲಿದುಕೊಳ್ಳುವುದಕ್ಕಾಗಿ. ಹೆಂಗಸರು ಬರೀ ಒಂದು ಕಂಬಳಿಯ ನಿಲುವಂಗಿಯನ್ನು ತಗಲು ಹಾಕಿಕೊಂಡು ಸೊಂಟಕ್ಕೆ ಒಂದು ದುಪ್ಪಟಿಯನ್ನು ಬಿಗಿದುಕೊಳ್ಳುವರು. ಬಹಳ ಕಷ್ಟಪಟ್ಟು ಕೆಲಸ ಮಾಡುವರು. ದೊಡ್ಡದೊಂದು ಬುಟ್ಟಿಯನ್ನು ಬೆನ್ನಿಗೆ ತಗಲು ಹಾಕಿಕೊಂಡು ಅದರಲ್ಲಿ ಗೊಬ್ಬರವನ್ನು ಮನೆಯಿಂದ ಹೊಲಕ್ಕೆ ತೆಗೆದುಕೊಂಡು ಹೋಗುವರು. ಹೊಲದಲ್ಲಿ ಕೆಲಸ ಮಾಡುವ ಇವರು ಕಾಣಲು ಸುಂದರವಾಗಿರುವರು. ಹಿಮಾಲಯದ ವಾತಾವರಣ ಅವರಿಗೆ ಕೊಟ್ಟ ವರ ಇರಬಹುದು. ಹೆಂಗಸರೆಲ್ಲ ಎಡಮೂಗಿನ ತುದಿಗೆ ದೊಡ್ಡದೊಂದು ಬಳೆಯನ್ನು ಬುಲಾಕಿನಂತೆ ತಗಲು ಹಾಕಿಕೊಳ್ಳುವರು. ಆ ಬಳೆ ಎಷ್ಟು ಅಗಲವಿರುವುದು ಎಂದರೆ ಗಲ್ಲಕ್ಕಿಂತಲೂ ಕೆಳಗೆ ಬರುವುದು. ಮತ್ತೆ ಕೆಲವರು ಮೂಗಿನ ಮಧ್ಯದಲ್ಲಿ ಒಂದು ತಗಡನ್ನು ಮೂಗಿನ ಬಟ್ಟಿನಂತೆ ತೂಗಿ ಬಿಡುವರು. ಅದು ಬಾಯಿಯ ಅರ್ಧ ಭಾಗವನ್ನೆಲ್ಲಾ

ಮುಚ್ಚಿ ಕೆಳಗಿನ ಗಲ್ಲದ ವರೆಗೂ ಬರುವುದು. ಅವರು ಊಟ ಮಾಡಬೇಕಾದರೆ ಎಡಗೈಯಿಂದ ಮೂಗು ಬಟ್ಟನ್ನು ಸರಿಸಿ ತುತ್ತನ್ನು ತಿನ್ನಬೇಕಾಗುವುದು! ಇವರ ಉಡುಗೆ ತೊಡಿಗೆಯನ್ನು ನಮ್ಮ ಊರಿಗೆ ಹೋದ ಮೇಲೆ ನಮ್ಮವರಿಗೆ ತೋರಿಸಬೇಕೆಂದು ಅವರು ಕಾಸು ಕೇಳಲು ಬಂದಾಗ ಅವರನ್ನು ಕ್ಯಾಮರಾ ಎದುರಿಗೆ ನಿಲ್ಲಿಸಿ ಫೋಟೋ ತೆಗೆದು ಕಾಸು ಕೊಟ್ಟು ಕಳುಹಿಸುತ್ತಿದ್ದೆವು.

ಸುಮಾರು 10 ಮೈಲಿ ನಡೆದ ಘಾಟಿ ಎಂಬ ಚೆಟ್ಟಿಗೆ ಬಂದಾಗ ಅವತ್ತು ಎಂದಿಗಿಂತ ಹೊತ್ತಾಗಿತ್ತು. ಉರಿ ಬಿಸಿಲು ಬೇರೆ.ಅಲ್ಲಿ ಅಕ್ಕ ಪಕ್ಕದಲ್ಲಿದ್ದ ತಂಗುವ ಸ್ಥಳದಲ್ಲೆಲ್ಲಾ ಯಾತ್ರಿಕರಿಂದ ತುಂಬಿ ಹೋಗಿತ್ತು. ನಮ್ಮವರಿಗಂತೂ ನಡೆದು ನಡೆದು ಸಾಕಾಗಿತ್ತು. ಎಲ್ಲಿಯಾದರೊಂದು ಕಡೆ ಕುಳಿತರೆ ಸಾಕು ಎನ್ನುತ್ತಿದ್ದರು. ಅ ಗ್ರಾಮವನ್ನು ನೋಡಿಕೊಂಡು ಹಾಗೆಯೇ ಕೊನೆಗೆ ಬಂದೆವು. ಅಲ್ಲಿಂದ ಸುಮಾರು ಎರಡು ಫರ್ಲಾಂಗು ಮೇಲೆ ಹೋದರೆ ಪ್ರವಾಸಿ ಬಂಗಲೆ ಇದೆ ಎಂದು ಹೇಳಿ ಅವರನ್ನು ಒತ್ತಾಯದಿಂದ ನಡೆಸಿಕೊಂಡು ಅಲ್ಲಿಗೆ ಹೋಗಿ ಸೇರಿದೆವು. ಅಲ್ಲಿ ಊರಿನ ಮನೆಗಿಂತ ಎತ್ತರದಲ್ಲಿ ಸುಂದರವಾದ ಸ್ಥಳದಲ್ಲಿ ಪ್ರವಾಸ ಗೃಹವಿತ್ತು. ಪುಣ್ಯವಶಾತ್ ಯಾರೂ ಬಂದಿರಲಿಲ್ಲ. ನಮ್ಮ ಕಡೆಯ ಕೂಲಿಗಳು ಜತೆ ನಾವು 6 ಜನ ಇವರನ್ನು ನೋಡಿ ಬಂಗಲೆಯವನು ಬಹಳ ವಿಶ್ವಾಸದಿಂದ ಕಂಡ ಆತನಿಗೆ ಕೆಲವು ದಿನಗಳ ಹಿಂದೆ ಯಾರೋ ರಾಜನ ಕಡೆಯವರು ಇಂದು ಬರುತ್ತಾರೆಂದು ಅವನಿಗೆ ಕಾಗದ ಬಂದಿತ್ತು. ಆತನ ನಮ್ಮನ್ನು ಕಂಡಾಗ ನಾವೇ ಆ ರಾಜರ ಕಡೆಯವರು ಇರಬೇಕೆಂದು ಯೋಚಿಸಿ ಗೌರವ ತೋರಿದ್ದು, ಕ್ರಮೇಣ ನಾವು ರಾಜನ ಕಡೆಯವರಲ್ಲ ಎಂದು ಅರ್ಥವಾದರೂ, ಒಂದು ದಿನ ತಂಗುವುದಕ್ಕೆ ಒಪ್ಪಿಗೆ ಕೊಟ್ಟ. ತಾನು ಕೂಡಾ ಇರುತ್ತೇನೆ ಎಂದ. ತಮ್ಮ ಅಡಿಗೆಯುವನು ಊಟಕ್ಕೆ ಚಪಾತಿ ಮಾಡಿಕೊಳ್ಳುತ್ತಿದ್ದ ಜೊತೆಗೆ ಇವನಿಗೂ ಮಾಡಿ ಬಡಿಸುವ ಎಂದೆವು. ಆದರೆ ಆತ ಅವತ್ತು ಚಪಾತಿ ತಿನ್ನುವುದಿಲ್ಲವಂತೆ. ಏನು ವ್ರತವೋ, ನೋಪಿಯೋ ಅಂತೆ. ಬರೀ ಅನ್ನ ಕೊಟ್ಟರೆ ಊಟ ಮಾಡುತ್ತೇನೆ ಎಂದ. ಆಗಲಿ ಎಂದೆವು ಅಂದು ಚಪಾತಿ ತಿಂದರೆ ವ್ರತ ಭಂಗ, ಅನ್ನ ಉಂಡರೆ ವ್ರತಪಾಲನೆ! ಅಂತೂ ಅಲ್ಲಿ ನೊಣದ ಕಾಟ ಅಷ್ಟಿರಲಿಲ್ಲ. ಸ್ಥಳ ಶುಭ್ರವಾಗಿತ್ತು. ಕುರ್ಚಿ, ಮೇಜು, ನಿಲುವುಗನ್ನಡಿ ಒಳಗೆ ನಳ್ಳಿ ಬೇರೆ ಇದ್ದವು. ರಾಜರ ಬಳಗ ಯಾರೋ ಬರುತ್ತಾರೆ ಎಂದು ಅವರು ಗುಡಿಸಿ ಎಲ್ಲಾ ಶುದ್ಧವಾಗಿಟ್ಟಿದ್ದು. ಆ ಸೌಭಾಗ್ಯ ನಮ್ಮಪಾಲಿಗೆ ಒದಗಿತ್ತು.

ಯಾತ್ರೆ ಮಾಡುವಾಗ ದಾರಿಯಲ್ಲಿ ಸಿಕ್ಕುವ ತರಕಾರಿ ಎಂದರೆ ಈರುಳ್ಳಿ, ಆಲೂಗಡ್ಡೆ ಅದಲ್ಲದೆ ಬೇರೇನೂ ಇಲ್ಲ. ಪ್ರತೀದಿನ ಅದನ್ನು ತಿಂದು ತಿಂದೂ ಬೇಜಾರಾಗಿತ್ತು. ಏನಾದರೂ ಬೇರೆ ಬಗೆಯ ತರಕಾರಿ ಸಿಕ್ಕಿತೇ ಎಂದು ಕನಸು ಕಾಣುತ್ತಿದ್ದೆವು. ಆಗ ನಮ್ಮ ಕೂಲಿಯವರು ಸುತ್ತ ಮುತ್ತಲ ಕಾಡಿಗೆ ಹೋಗಿ ನುಗ್ಗಿ ಎಂತದೋ ಒಂದು ಬಗೆಯ ಸೊಪ್ಪನ್ನು ತಂದು ಬೇಯಿಸಿದರು. ನನ್ನೊಂದಿಗಿರುವವರಿಗೆ ಅದನ್ನು ತಿನ್ನಲು ಅಂಜಿಕೆಯಾಯಿತು. ಆದರೆ ನಾನು 'ನೀವು ಮಾಡುವ ಪಲ್ಯ ನನಗೂ ಸ್ವಲ್ಪ ಕೊಡಿ' ಎಂದಾಗ ಅವರಿಗೆ ತುಂಬಾ ಸಂತೋಷವಾಯಿತು. ನಾನು ಅದನ್ನು ತಿಂದಾದ ಮೇಲೆ 'ಪಲ್ಯ ತುಂಬಾ ಚೆನ್ನಾಗಿತ್ತು' ಎಂದು ಹೇಳಿದಾಗ ಅವರ ಮುಖ ಹಿಗ್ಗಿ ಹೋಯಿತು. ರುಚಿಯಾಗಿರುವ ಅಡಿಗೆ

ಮಾಡಿ ಅದನ್ನು ಮತ್ತೊಬ್ಬರಿಗೆ ಕೊಟ್ಟು ಚೆನ್ನಾಗಿದೆ ಎನಿಸಿಕೊಂಡರೆ ಮಾಡಿದವರಿಗೆ ಒಂದು ಸಂತೋಷ.

**– ಸಾಧಾರ**

- ಅಧ್ಯಾಪಕರು ಕೆಲವು ಪ್ರೇರಣಾತ್ಮಕ ಪ್ರಶ್ನೆಗಳನ್ನುಕೇಳುವುದು
- ಈ ಪ್ರವಾಸ ಕಥನವನ್ನು ಓದಿದಾಗ ನಿಮಗೇನನ್ನಿಸಿತು?
- ಮಕ್ಕಳ ಅನುಭವಗಳನ್ನು ಹೇಳಿಸುವುದು

ಅನಂತರ ಮಕ್ಕಳು ತಮ್ಮ ಪ್ರವಾಸಾನುಭವವನ್ನು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಸೂಚಕದ ಆಧಾರದಲ್ಲಿ ಮೌಲ್ಯಮಾಪನ ಮಾಡುವುದು.

**ಮೌಲ್ಯನಿರ್ಣಯ ಸೂಚಕಗಳು**

- ಪ್ರವಾಸಿ ತಾಣದ ಸಮಗ್ರ ವಿವರಣೆಯಿದೆ
- ಆಶಯವು ಸ್ಪಷ್ಟವಾಗಿದೆ
- ಸ್ವಂತ ಶೈಲಿಯಿಂದ ಕೂಡಿದೆ
- ಆಶಯವು ಕ್ರಮೀಕರಿಸಲ್ಪಟ್ಟಿದೆ

**ಸಂಗ್ರಹಿಸಿ ಬರೆಯುವುದು**

ಮಕ್ಕಳು ತಮಗೆ ತಿಳಿದಿರುವ ಅನುಕರಣ ವಾಚಕ ಪದಗಳನ್ನು ಹೇಳಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಆ ಪದಗಳನ್ನು ಉಪಯೋಗಿಸಿ ಮಕ್ಕಳು ಸ್ವಂತ ವಾಕ್ಯ ಮಾಡಿ ಬರೆದು ಮಂಡಿಸಲಿ.

**ಉದಾ :**

- ತಿಮ್ಮನು ಹಸಿವಿನಿಂದ ಗಬಗಬನೆ ತಿಂದನು
- ಚಿನ್ನವು ಥಳಥಳನೆ ಹೊಳೆಯುತ್ತಿತ್ತು.
- ಬಿರುಗಾಳಿಗೆ ಮರದ ಕೊಂಬೆಯು ಛಟಛಟನೆ ಮುರಿಯಿತು.

**ಪೂರಕ ಓದಿಗೆ**

## ಕಡಲ ತೀರದಿಂದ ಹಿಮಗಿರಿಯೆಡೆಗೆ

ಗೌರೀಕುಂಡಕ್ಕೆ ಸಾಯಂಕಾಲ ತಲುಪಿದೆವು. ಇಲ್ಲಿ ಒಂದು ಹೋಟೆಲಿನಲ್ಲಿ ಒಂದು ಹೊಸ ಅನುಭವ. ನಾಲ್ಕು ರೂಪಾಯಿಗಳಿಗೆ ಚಪಾತಿ, ಅನ್ನ ಧಾರಾಳ. ಆದರೆ ಅಲ್ಲೇ ಆ ಚಪಾತಿಗಳನ್ನು ಸಂಖ್ಯೆ ಹೇಳಿ 'ಬಿಲ್' ಕೊಡುವುದಾದರೆ ಐವತ್ತು ಪೈಸೆಗಳಂತೆ ಎಂದರೆ ನಾಲ್ಕು ರೂಪಾಯಿಗಳನ್ನು ಮೀರಿಸಬಹುದು. ಎಂತಹ ವಿಚಿತ್ರ ಕ್ರಮ? ಗೌರೀಕುಂಡದ ನಾಯಿಗಳು ಒಂದು ವಿಶೇಷ ತಳಿಯವು. ನೋಡುವಾಗ ನಮಗೆ ಹೆದರಿಕೆಯಾದರೂ ಅವುಗಳ ವರ್ತನೆಯಿಂದ ನಾವು ಹೆದರಬೇಕಾಗಿಲ್ಲ. ಸಾಧು ಸ್ವಭಾವದವುಗಳು. ಗೌರೀಕುಂಡದಲ್ಲಿ ವಸತಿಗೃಹಗಳು ಕಡಿಮೆ ಯಾತ್ರಿಕರು ಅಧಿಕ. ಎರಡು ಬಸ್ಸುಗಳಲ್ಲಿ ಹೋದ ನಾವು ಮೂರು ನಾಲ್ಕು ಕೋಣೆಗಳಲ್ಲಿ ತುಂಬಿಕೊಂಡೆವು. ಲಗೇಜುಗಳನ್ನು ಅಲ್ಲಿಟ್ಟು ಚಳಿಯಿಂದ ಪಾರಾಗಲು ಬಿಸಿನೀರಿನ ಕೆರೆಗೆ ಶರಣು ಬಂದೆವು. ಹೋರಿಯ ಬಾಯಿಂದ – ವಿಗ್ರಹದಿಂದ –

ಬಿಸಿ ನೀರಿನ ಬಿಸಿಬಿಸಿ ಧಾರೆ ಸತತವಾಗಿ ಹಬೆಯಾಡುತ್ತಾ ಕೆರೆಯ ಉದ್ದಗಲಕ್ಕೂ ತುಂಬುತ್ತದೆ. ಚೌಕದ ಈ ಕೆರೆಯಲ್ಲಿ ಎಲ್ಲರೂ ಇಳಿದು. ಸಾಬೂನೂ ಹಾಕಿ ಬೇಕಾದಷ್ಟು ಹೊತ್ತು ಮೀಯಬಹುದು. ಮನಸ್ಸಿದ್ದರೆ ಹಣ ಕೊಡಬಹುದು. ಹಳೆಯ ನೀರು ದೂರ ಸರಿಯಲು ದೊಡ್ಡದೊಂದು ದ್ವಾರವಿದೆ. ನೀರು ತುಂಬಲು ಆ ದ್ವಾರವನ್ನು ಗೋಣಿ ಮತ್ತು ಕಲ್ಲುಗಳಿಂದ ಮುಚ್ಚುತ್ತಾರೆ. ಅಂತೂ ನಮ್ಮ ಶರೀರ ಬಿಸಿಯಾಗಿ ಚಳಿ ನೀಗಿತು. ಹುಮ್ಮಸ್ಸು ಏರಿತು. ಊಟಮಾಡಿ ನಿದ್ರಿಸಲು ಪ್ರಯತ್ನಿಸಿದೆವು. ಮುಂಜಾನೆ ನಾಲ್ಕರಿಂದ ಮತ್ತೆ ಅದೇ ಹೊಸತಾದ ಶುದ್ಧವಾದ ಬಿಸಿನೀರಿನ ಮಜ್ಜನ. ಇಲ್ಲಿ ಕರೆಂಟಿಲ್ಲ. ಮೇಣದ ಬತ್ತಿಗಳ ಪ್ರಕಾಶವೇ ಆಸರೆ. ಬಯಸುವವನು ಎಷ್ಟು ಸಲವೂ ಉಚಿತವಾಗಿ ಸ್ನಾನ ಮಾಡಬಹುದು. ಅಲ್ಲಿ ನಿರಂತರ ಬಿಸಿ ಧಾರೆ ಬರುತ್ತಿರುತ್ತದೆ. ಹತ್ತಿರವೇ ಔಷಧಾಲಯ ಇದೆ. ಸ್ವಲ್ಪ ದೂರದಲ್ಲಿ ಉಚಿತವಾದ ಆಶ್ರಮದ ವತಿಯ ಚಿಕಿತ್ಸಾಲಯವಿದೆ. ಬೆಳಗ್ಗಿನ ಉಪಾಹಾರ ಮುಗಿಸಿ, ಕೇದಾರೇಶ್ವರ ಯಾತ್ರೆಗೆ ಬೇಕಾಗುವ ಸಕಲ ಸಿದ್ಧತೆಗಳನ್ನು ಪೂರೈಸಿದೆವು. ಆಗಿನ ನಮ್ಮ 'ಪೊರಪ್ಪಾಟು' ರಣಕಣಕ್ಕೆ ಹೋಗುವ ಪಟುಭಟರನ್ನು ಹೋಲುತ್ತಿತ್ತು. ಅಲ್ಲಿಗೆ ನಾಲ್ಕು ವಿಧಾನಗಳಿಂದ ಹೋಗಬಹುದು. ಪಾದಚಾರಿಯಾಗಿ, ಡೋಲಿಯಲ್ಲಿ, ದಂಡಿಯಲ್ಲಿ, ಕುದುರೆಯಲ್ಲಿ, ಗೌರೀಕುಂಡದಿಂದ ಕೇದಾರ ಹದಿನಾಲ್ಕು ಕಿ.ಮೀ. ದೂರದಲ್ಲಿದೆ. ದಾರಿಯಲ್ಲಿ ಅಲ್ಲಲ್ಲಿ ಸನ್ಯಾಸಿಗಳ ವಾಸವಿದೆ.

ಪಾದಚಾರಿಯಾಗಿ ಹೋಗುವವರಿಗೆ ಯಾರದೂ ಹಂಗಿಲ್ಲ. ಏಕೆಂದರೆ ಅವರು ಸ್ವತಂತ್ರರು. ಬೇಕಾದಲ್ಲಿ ಕುಳಿತುಕೊಳ್ಳಬಹುದು. ಮುಂದುವರಿಯಬಹುದು. ಡೋಲಿಯಾದರೆ ದೃಢಕಾಯವುಳ್ಳ ವ್ಯಕ್ತಿಯೊಬ್ಬ ತನ್ನ ಹಿಂದೆ ಕಟ್ಟಿಕೊಂಡ ಬುಟ್ಟಿಯಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಾನೆ. ದಂಡಿಯಲ್ಲಿ ನಾಲ್ಕು ಜನರು ಒಬ್ಬನನ್ನು ಹೊತ್ತುಕೊಂಡು ಹೋಗುವವರು. ಇದು ಸಾಧಾರಣ ಪಾಲಕಿಯಂತೆ. ಕುದುರೆಗಳಲ್ಲಾದರೆ ಸವಾರಿ ಮಾಡುವವನ ಮತ್ತು ಕುದುರೆಯ ರಕ್ಷಣೆಗೆ ಅದರ ಇಬ್ಬದಿಗಳಲ್ಲಿ ಇಬ್ಬರು ಕುದುರೆಯನ್ನು ಹಿಡಿದುಕೊಂಡು ಅಲ್ಲಿಯವರೆಗೆ ಬರುವರು. ಎಲ್ಲಿಯವರೆಗೆ ಕುದುರೆ ನಡೆಯಬಲ್ಲುದೋ ಅಲ್ಲಿಯ ವರೆಗೆ. ಎಂದರೆ ಅತ್ಯಂತ ಹೆಚ್ಚಿನ ಹಿಮರಾಶಿಗಳಲ್ಲಿ ಅದಕ್ಕೆ ಗೊರಸುಗಳನ್ನು ತೆಗೆಯಲಾಗುವುದಿಲ್ಲ. ಬುಟ್ಟಿಯಲ್ಲಿ, ದಂಡಿಯಲ್ಲಿ ಪ್ರಯಾಣಿಸುವವರಿಗೆ ಮತ್ತು ಅಶ್ವಾರೋಹಿಗಳಿಗೆ ಸ್ವಲ್ಪವಾದರೂ ನಡೆಯಲೇಬೇಕಾಗುತ್ತದೆ. ಏಕೆಂದರೆ ಎಷ್ಟಾದರೂ ಮನುಷ್ಯರು ಮತ್ತು ಪ್ರಾಣಿಗಳಷ್ಟೆ! ಕೆಲವು ಕಡೆಗಳಲ್ಲಿನ ಏರುತಗ್ಗುಗಳೂ, ಸಂಕೀರ್ಣ ಸ್ಥಳಗಳೂ ಇಂತಹ ಪರಿಸ್ಥಿತಿಯನ್ನು ತಂದೊಡ್ಡುತ್ತವೆ. ಹೀಗೆ ಹಿಂದೀ ಭಾಷೆ ಬಾರದ, ಬೆಂಗಳೂರಿನ ವೃದ್ಧೆಯೋರ್ವರು ನಿಶ್ಚಿತ ಸ್ಥಳಕ್ಕಿಂತ ಸ್ವಲ್ಪ ಮೊದಲೇ ಕುದುರೆಯಿಂದ ಇಳಿಯಬೇಕಾಯಿತಂತೆ. ಅವರು ನಡೆಯಲೂ ಅಶಕ್ತರು. ನಾವು ಕೆಲವರು ಸೇರಿ ಅವರನ್ನು ಇನ್ನೊಂದು ಕುದುರೆಯ ಮೂಲಕ ಅದೆಷ್ಟು ಕಡಿಮೆ ವೆಚ್ಚದಲ್ಲಿ ಸಾಧ್ಯವಿರುವಲ್ಲಿವರೆಗೆ ಅಶ್ವಾರೋಹಿಯಾಗಿ

ಹೋಗುವಂತೆ ವ್ಯವಸ್ಥೆ ಮಾಡಿದೆವು. ಹಣವಿದ್ದೂ ಅವರ ಅಸಹಾಯಕತೆ. ಗಾಬರಿ ಎಂಥವರನ್ನೂ ಗಾಬರಿಗೊಳಿಸುವಂತಹದಾಗಿತ್ತು. ಪಾದಚಾರಿಗಳಾಗಿ ಹೋಗುವವರನ್ನುಳಿದು ಇತರ ಎಲ್ಲರೂ – ಮೂರು ವಿಧಾನಗಳಿಂದ ಸಂಚರಿಸುವರೂ – ಸಂಬಂಧಪಟ್ಟ ವ್ಯಕ್ತಿಗಳ ಅಲ್ಲಲ್ಲಿನ ಆಹಾರ ಪಾನೀಯಗಳನ್ನೂ ಉಚಿತವಾಗಿ (ಕಂಟ್ರಾಕ್ಟ್ ಹಣವಿಲ್ಲದೆ) ಅವರಿಗೆ ಬೇಕಾದಷ್ಟು ಹೊಟ್ಟೆ ತುಂಬಿಸುವ ಜವಾಬ್ದಾರಿಯುಳ್ಳವರೆಂಬುದು ಗಮನಾರ್ಹ. ಕೆಲವೊಮ್ಮೆ ಎರಡು ಸಲದ ಪ್ರಯಾಣಕ್ಕೆ ಹೋಗಲು ಬರಲು ಸಾಧಾರಣ ಐವತ್ತು, ನೂರು ರೂಪಾಯಿಗಳೂ ಆಗಬಹುದು! ಕುದುರೆಯ ಮೇವನ್ನು ನೋಡಬೇಕಷ್ಟೆ! ಒಂದು ಒಂದೂವರೆ ಕಿಲೋಮೀಟರಿಗೊಂದರಂತೆ ಯಾದರೂ ಸಣ್ಣ ಸಣ್ಣ ಹೋಟೇಲುಗಳು ಇರುವುದು ಅನುಕೂಲ, ಹಾಗೆ ಇವೆ. ಬುಟ್ಟಿಗೆ ನೂರು ರಾಪಾಯಿಗಳಾದರೆ ದಂಡಿಗೆ (ಡೋಲಿಗೆ) ನಾಲ್ಕು ಮಂದಿ ಹೊತ್ತುಕೊಂಡು ಹೋಗುವವರಿಗೆ ಅದರ ಮೂರು ನಾಲ್ಕು ಪಾಲಾದರೂ ಆಗಬಹುದು. ಕುದುರೆಗೆ ರೂಪಾಯಿ ಇನ್ನೂರೈವತ್ತಾದರೂ ಆಗಬಹುದು. ಮತ್ತೆ ಕೆಲವೊಮ್ಮೆ ಹೆಚ್ಚು ಕಡಿಮೆ ಪರಿಸ್ಥಿತಿಯ ಒತ್ತಡದಿಂದ! ಏನಾದರೂ ಒಂದು ಹೆಜ್ಜೆಯೂ ನಡೆಯದೆ ಯಾರಿಗೂ ಸಾಧ್ಯವಿಲ್ಲವೆಂಬುದು ಲಕ್ಷ್ಯದಲ್ಲಿಡಬೇಕಾದ ಮುಖ್ಯ ವಿಷಯ. ಅಪರೂಪವಾಗಿ ಹೀಗೆಯೇ ಇರುತ್ತದೆ ಎಂದರೆ ಯಾರೂ ನಂಬಲಾರರಷ್ಟೆ. ಎಷ್ಟು ಹಣ ಕೊಟ್ಟರೂ ಕಾಲ್ನಡಿಗೆಯಲ್ಲದೆ ಬೇರೆ ದಾರಿಯಿಲ್ಲದ ಪ್ರಸಂಗವೂ ಇದೆ! ಅಷ್ಟೂ ಭಾರವಾದ ವ್ಯಕ್ತಿಗಳಿಗೆ ಮಾತ್ರ ಇದು ಅನ್ವಯಿಸುವುದಷ್ಟೇ! ಆದರೆ ಶುದ್ಧ ಹೃದಯಿಗಳಾದ ನೇಪಾಳಿಗಳ ಒಡನಾಟ ಒಂದು ಅಪೂರ್ವ ಅನುಭವ. ಕಾಲು ಸೋತರೆ ಅಲ್ಲಲ್ಲಿ ಎಲ್ಲಿಂದ ಬೇಕಾದರೂ ಅತ್ತಿತ್ತ ಕೊಂಡೊಯ್ಯುವ ಉಪಕಾರ ಬುದ್ಧಿ. ಅವರಲ್ಲಿದೆ! ತಿರುಗಾಡುತ್ತಿರುವ ಅವರ ಸೇವಾ ಮನೋಭಾವ ಚಿರಸ್ಮರಣೀಯ.

**– ಗೌರಿ ಭಟ್**

## ಒಂದು ರಾತ್ರೆ

ನಿಸರ್ಗವು ವೈವಿಧ್ಯಪೂರ್ಣವಾಗಿದೆ. ಆ ಸೌಂದರ್ಯವನ್ನು ನೋಡಿ ಅನುಭವಿಸುವ ಹೃದಯ ವೈಶಾಲ್ಯ ನಮಗಿರಬೇಕು. ಈ ನಿಸರ್ಗದ ಸೊಬಗಿಗೆ ಮೂಲ ಕಾರಣ ಪ್ರಕೃತಿಯ ಕಣ್ಣುಗಳಂತಿರುವ ಸೂರ್ಯ–ಚಂದ್ರರು. ಹಗಲಲ್ಲಿ ಸೂರ್ಯ ಮೂಡಿದರೆ ರಾತ್ರಿಯಲ್ಲಿ ಚಂದ್ರ ಬೆಳಗುತ್ತಾನೆ. ಆ ಚಂದ್ರನ ತಂಪಾದ ಬೆಳದಿಂಗಳ ಸುಮಧುರ ಕ್ಷಣಗಳನ್ನು ಸವಿಯುವುದೇ ನಮ್ಮ ಭಾಗ್ಯ. ಅಂತಹ ಒಂದು ಸುಂದರ ಹುಣ್ಣಿಮೆ ರಾತ್ರಿಯನ್ನು ಶ್ರೀ ಎಸ್.ವಿ. ಪರಮೇಶ್ವರ ಭಟ್ಟರು ಬರೆದ 'ಒಂದು ರಾತ್ರಿ' ಎಂಬ ಕವಿತೆಯ ಮೂಲಕ ಸವಿಯೋಣ.

### ಕವಿ ಪರಿಚಯ

ಕನ್ನಡದ ಪ್ರಸಿದ್ಧ ಸಾಹಿತಿಗಳಲ್ಲಿ ಒಬ್ಬರಾದ ಶ್ರೀಎಸ್.ವಿ.ಪರಮೇಶ್ವರ ಭಟ್ಟರು 1914 ಫೆ.8ರಂದು ವಿದ್ಯಾರಣ್ಯಪುರದಲ್ಲಿ ಜನಿಸಿದರು. ಇವರ ತಂದೆ ಸದಾಶಿವ ರಾಯರು. ತಾಯಿ ಲಕ್ಷ್ಮಮ್ಮ. ತೀರ್ಥಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಬೆಂಗಳೂರಿನಿಂದ ಎಂ.ಎ. ಪದವಿ ಪಡೆದರು. ಇಂದ್ರಚಾಪ, ಗಗನಚುಕ್ಕಿ, ಸೀಳುನೋಟ, ಕಣ್ಣು ಮುಚ್ಚಾಲೆ, ಗೀತಗೋವಿಂದ ಮುಂತಾದ ಕೃತಿಗಳನ್ನು ಅವರು ರಚಿಸಿದ್ದಾರೆ. ರಾಜ್ಯ ಸಾಹಿತ್ಯಅಕಾಡಮಿ ಪುರಸ್ಕಾರ, ಚಾವುಂಡರಾಯ ಪ್ರಶಸ್ತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಪ್ರಶಸ್ತಿಗಳನ್ನು ಪಡೆದಿದ್ದಾರೆ.

### ಪಾಠ ಪ್ರವೇಶ

‘ಹುಣ್ಣಿಮೆ ಚಂದ್ರೋದಯ’ದ ಬಗ್ಗೆ ವೀಡಿಯೋ ಕ್ಲಿಪ್ಪಿಂಗ್ ತೋರಿಸುವುದು. ಈ ಚಿತ್ರಕ್ಕೆ ಸಂಬಂಧಿಸಿ ಆದೇ ಟಿಪ್ಪಣಿಯನ್ನು ಮಕ್ಕಳು ಬರೆದು ಮಂಡಿಸಲಿ.

### ಹಾಡುವುದು

ಅನಂತರ ‘ಒಂದು ರಾತ್ರಿ’ ಎಂಬ ಪದ್ಯಕ್ಕೆ ರಾಗ ಸಂಯೋಜಿಸಲಿ. ಗುಂಪಿನಲ್ಲಿ ಹಾಡಲಿ. ಉಳಿದ ಗುಂಪಿನವರು ಸೂಚಕದ ಆಧಾರದಲ್ಲಿ ಮೌಲ್ಯಮಾಪನ ಮಾಡಲಿ. ಅಧ್ಯಾಪಕರು ಸ್ವರಭಾರಯುಕ್ತವಾಗಿ ಹಾಡುವುದು/ ಧ್ವನಿಸುರುಳಿಯನ್ನು ಕೇಳಿಸುವುದು. ಮಕ್ಕಳು ಪದ್ಯದಲ್ಲಿರುವ ನವೀನ ಪದಗಳನ್ನು ಗುರುತಿಸಿ ಅರ್ಥಕೋಶದಿಂದ ಕಂಡು ಹಿಡಿಯಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.

### ಉತ್ತರ ಬರೆಯುವುದು

ಆಶಯ ಗ್ರಹಣಕ್ಕಿರುವ ಪ್ರಶ್ನೆಗಳನ್ನು ಅಧ್ಯಾಪಕರು ಮಕ್ಕಳಲ್ಲಿ ಕೇಳುವುದು. ಮಕ್ಕಳು ಬಾಯ್ದೆರೆಯಾಗಿ ಉತ್ತರವನ್ನು ಹೇಳಿ ಬರೆದು ಮಂಡಿಸಲಿ. ಅಧ್ಯಾಪಕರು ಮೌಲ್ಯಮಾಪನ ಮಾಡುವುದು.

### ಸಾರಾಂಶ ಬರೆಯುವುದು

ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಒಂದೊಂದು ಪದ್ಯವನ್ನು ಒಂದೊಂದು ಗುಂಪಿಗೆ ನೀಡಿ ಅದರ ಸಾರಾಂಶವನ್ನು ಚರ್ಚಿಸಿ ಹೇಳಲಿ. ಅನಂತರ ವೈಯಕ್ತಿಕವಾಗಿ ಪೂರ್ಣ ಪದ್ಯಗಳ ಸಾರಾಂಶ ಬರೆದು ಮಂಡಿಸಲಿ. ಗುಂಪಿನಲ್ಲಿ ಉತ್ತಮಪಡಿಸಲಿ. ಅಧ್ಯಾಪಕರು ಬರೆದ ಸಾರಾಂಶವನ್ನು ಪ್ರದರ್ಶಿಸುವುದು.

### ಮೌಲ್ಯನಿರ್ಣಯ ಸೂಚಕಗಳು

- ಆಶಯ ಸ್ಪಷ್ಟತೆ/ಪೂರ್ಣತೆ
- ಭಾಷಾಶೈಲಿ
- ಕ್ರಮೀಕರಣ

### ಪದ ಗುರುತಿಸುವುದು

ಪಠ್ಯಪುಸ್ತಕದಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಕ್ರಮೀಕರಿಸಿ ಪದಗಳನ್ನು ಬರೆದು ಮಕ್ಕಳು

ಮಂಡಿಸಲಿ. ಅನಂತರ ಇದೇ ರೀತಿಯ ಇತರ ಪದಗಳ ಅಕ್ಷರಗಳನ್ನು ಕ್ರಮತಪ್ಪಿಸಿ ನೀಡುವುದು. ಅರ್ಥಪೂರ್ಣ ಪದಗಳನ್ನು ರಚಿಸಿದ ಗುಂಪನ್ನು ಅಭಿನಂದಿಸುವುದು.

- ಜೇನುಗನಸು
- ಹೊಳೆಯೊಳಂಬಿಗನ
- ಗರಿಮುದುರಿ
- ನರುಗಂಪಿನುದರದಲಿ
- ಶುಭೋದಯ

## ಪದ ವಿಂಗಡಿಸಿ ಬರೆಯುವುದು

ಕವಿತೆಯಲ್ಲಿ ಬಂದ ಸಂಯುಕ್ತ ಪದಗಳನ್ನು ಪಟ್ಟಿ ಮಾಡಲಿ. ಅನಂತರ ಗುಂಪಿನಲ್ಲಿ ಆ ಪದಗಳನ್ನು ವಿಂಗಡಿಸಿ ಬರೆದು ಓದಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.

| | | |
|---|---|---|
| ಹೊಂಗನಸು | + | ಊಡಿ |
| ಮುಗುಳು | + | ಇರುವ |
| ಹೊಳೆಯೊಳು | + | ಅಂಬಿಗನ |
| ಜೇನು | + | ಕನಸು |
| ನವ | + | ಉದಯ |
| ಶುಭ | + | ಉದಯ |

## ಬದಲಾಯಿಸಿ ಬರೆಯುವುದು

ಮಕ್ಕಳು ಸೂಚನೆಯಂತೆ ವಾಕ್ಯಗಳನ್ನು ಬದಲಾಯಿಸಿ ಹೇಳಲಿ. ಆ ವಾಕ್ಯಗಳಲ್ಲಿ ಉಂಟಾಗುವ ಬದಲಾವಣೆಯನ್ನು ಗಮನಿಸಲಿ. ಅನಂತರ ಬರೆದು ಮಂಡಿಸಲಿ.

## ಕವನ ರಚಿಸುವ

ಚಂದಿರನ ಕುರಿತಾದ ಹಾಡುಗಳನ್ನು ಸಿ.ಡಿ.ಯನ್ನುಪಯೋಗಿಸಿ ಕೇಳುವುದು. ಹುಣ್ಣಿಮೆ ಚಂದಿರನ ದೃಶ್ಯವನ್ನು ಪ್ರದರ್ಶಿಸುವುದು ಹುಣ್ಣಿಮೆಯ ಚಂದ್ರನ ಸೌಂದರ್ಯವನ್ನು ಮಕ್ಕಳು ನೋಡಿ ಆಸ್ವಾದಿಸಲಿ.

ಮಕ್ಕಳಿಗೆ ಕವಿತೆ ರಚಿಸಲು ಸಹಾಯವಾಗುವಂತೆ ಕೆಲವು ಪದಗಳನ್ನು ಅಧ್ಯಾಪಕರು ನೀಡಬಹುದು.

ಚಂದಿರ, ಮೋಡ, ತಾರೆ, ಹೊಂಬೆಳಕು, ಬೆಳ್ಳಿಯ ಬಟ್ಟಲು, ಬೆಳದಿಂಗಳು, ತಂಗಾಳಿ, ಬಾನು ಚುಕ್ಕಿ , ಹಕ್ಕಿ, ಮಂಜಿನ ಹನಿ

ಕವಿತೆ ರಚಿಸುವ ಕ್ರಮವನ್ನು ತರಗತಿಯಲ್ಲಿ ಚರ್ಚಿಸಿರಿ.

ಮಕ್ಕಳು ವೈಯಕ್ತಿಕವಾಗಿ ಕವಿತೆ ರಚಿಸಿ ಮಂಡಿಸಲಿ. ಸೂಚಕದ ಆಧಾರದಲ್ಲಿ ಮೌಲ್ಯಮಾಪನ ಮಾಡಲಿ. ಬಳಿಕ ಕವನ ಸಂಚಿಕೆ ತಯಾರಿಸುವುದು.

## ಹುಣ್ಣಿಮೆ ರಾತ್ರಿ

ಹುಣ್ಣಿಮೆ ಹರಸಿದ ಇರುಳಲಿ ಮನೆಯಲಿ
ಸುಮ್ಮನೆ ಕೂಡಲು ಬೇಡಣ್ಣ
ಹೊರಗಡೆ ಓಡುತ ಭೂಮಿಯ – ಬಾನಿನ
ಚಂದದ ನೋಟವ ನೋಡಣ್ಣ

ಹಾಲಿನ ಹೊಳೆಯೇ ಹರಿದಿದೆ ಸುತ್ತಲು
ರಾಶಿಯ ಮಲ್ಲಿಗೆ ಚೆಲ್ಲಿಹುದು
ಎನ್ನುವ ಭಾವನೆ ಮೂಡಿಸಿ ಬೆಳಗಿದ
ತಿಂಗಳ ಬೆಳಕೇ ಇಲ್ಲಿಹುದು

ನೀಲಾಕಾಶದಿ ಮಿಣಿಮಿಣಿ ಮಿನುಗುವ
ಲೆಕ್ಕಕೆ ಸಿಕ್ಕದ ಚುಕ್ಕೆಗಳು
ಫಳ ಫಳ ಹೊಳಪಿನ ಮಣಿಗಳ ಹೋಲುವ
ಬೆಳ್ಳಿಯ ಬೆಳಕಿನ ಚುಕ್ಕೆಗಳು

ದುಂಡನೆ ಬೆಣ್ಣೆಯ ಮುದ್ದೆಯ ಹಾಗಿನ
ಹುಣ್ಣಿಮೆ ಮಾಮನು ಅಲ್ಲಿರುವ
ಮೌನದ ನಗುವಿನ ಹೂಗಳ ಹಾಗಿನ
ಇಂತಹ ಚೆಲುವನು ಎಲ್ಲಿರುವ?

ತೇಲುವ ಅರಳೆಯ ಬೆಟ್ಟದ ಬೆಡಗಿನ
ಮೋಡಗಳಲ್ಲಿಯೆ ಓಡುತಿವೆ
ಚಂದಿರ ದೇವನ ಜೊತೆಯಲಿ ತಾವೇ
'ಕಣ್ಣಾಮುಚ್ಚೇ' ಆಡುತಿವೆ.

*– ಪಳಕಳ ಸೀತಾರಾಮ ಭಟ್ಟ*

## ಮೌಲ್ಯನಿರ್ಣಯ ಚಟುವಟಿಕೆಗಳು

1. ನಿಮಗೆ ಗಾದೆಗಳು ಇಷ್ಟವಲ್ಲವೇ? ನಿಮಗೆ ಎಷ್ಟು ಗಾದೆಗಳು ತಿಳಿದಿವೆ? ನೀವು ತಿಳಿದಿರುವ ಐದು ಗಾದೆಗಳನ್ನು ಬರೆಯಿರಿ. ಅದರಲ್ಲಿ ಒಂದನ್ನು ಆಯ್ದುಕೊಂಡು ಆಶಯವನ್ನು ವಿವರಿಸಿ ಬರೆಯಿರಿ.

2. ರಜಾದಿನಗಳಲ್ಲಿ ನೀವು ಏನು ಮಾಡುವಿರಿ? ಪ್ರವಾಸ ಹೋಗುತ್ತೀರಿ ತಾನೇ? ಎಲ್ಲಿಗೆಲ್ಲ ಹೋಗಿದ್ದೀರಿ? ನೀವು ಕೈಗೊಂಡ ಯಾವುದಾದರೊಂದು ಪ್ರವಾಸದ ಅನುಭವವನ್ನು ವಿವರಿಸಿ ಬರೆಯಿರಿ.

3. ನಿಮ್ಮ ಊರಿನಲ್ಲಿಯೂ ಜಾತ್ರೆ ನಡೆಯುತ್ತದೆಯಲ್ಲವೇ? ನೀವು ಜಾತ್ರೆಗೆ ಹೋಗಿರುವಿರಾ? ಅಲ್ಲಿ ಏನೇನು ನೋಡಿದ್ದೀರಿ? ಮಿಠಾಯಿ, ಪಾತ್ರೆಗಳು, ಆಟಿಕೆಗಳು, ಬಟ್ಟೆಬರೆ, ರಾಟೆ ತೊಟ್ಟಿಲು, ಇತ್ಯಾದಿ. ಹಾಗಾದರೆ ನೀವು ನೋಡಿದ ಜಾತ್ರೆಯನ್ನು ವರ್ಣಿಸಿ ಬರೆಯಿರಿ.

4. ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ ಸಾರಾಂಶವನ್ನು ಬರೆಯಿರಿ.

## ವರ್ಷ ವೈಭವ

ತಂಗಾಳಿಯ ಮೆಲುಮಾತಿಗೆ
ತಲೆದೂಗಿತು ಮೋಡ
ತೇಲಾಡಿತು ಓಲಾಡಿತು
ಮಳೆಯಾಯಿತು ನೋಡ
ಹನಿಯಾಯಿತು ಧ್ವನಿಯಾಯಿತು
ಧರೆಗಿಳಿಯಿತು ನೀರು
ಹಸನಾಯಿತು ಉಸಿರಾಯಿತು
ಭೂದೇವಿಯ ತೇರು
ತೊರೆ ಹರಿಯಿತು ನದಿ ಸೊಕ್ಕಿತು
ಮೇಲೆದ್ದಿತು ಕಡಲು

5. 'ವರ್ಷ ವೈಭವ' ಪದ್ಯವನ್ನು ಓದಿದ್ದೀರಲ್ಲವೇ? ಇದರಲ್ಲಿ ನಿಮಗೆ ಮೆಚ್ಚುಗೆಯಾದ ಸಾಲುಗಳು ಯಾವುವು? ಯಾಕೆ? ಟಿಪ್ಪಣಿ ಬರೆಯಿರಿ.

* * *